# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

CIN:U40109KA2004SGCO35177
ನೋಂದಾಯಿತ ಕಛೇರಿ ವಿಳಾಸ:
ನಿಗಮ ಕಾರ್ಯಾಲಯ,
ವಿಜಯನಗರ 2ನೇ ಹಂತ,
ಹಿನ್‌ಕಲ್, ಮೈಸೂರು
Web site: www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ ಕಛೇರಿ
ಚಾ.ವಿ.ಸ.ನಿ.ನಿ., ಕುವೆಂಪುನಗರ ಉಪವಿಭಾಗ,
ಗಗನಚುಂಬಿ ಜೋಡಿರಸ್ತೆ, ಮೈಸೂರು.
ದೂರವಾಣಿ ಸಂಖ್ಯೆ: 2560803
ಮೊಬೈಲ್: 9448994743.
E-mail: aeekmp1@cescmysore.org

## ಸಭಾ ನಡಾವಳಿ

ದಿನಾಂಕ: 20-11-2018 ರಂದು ಬೆಳಿಗ್ಗೆ 11.00 ಗಂಟೆಗೆ ಅಧೀಕ್ಷಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ., ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಕುವೆಂಪುನಗರ ಉಪವಿಭಾಗದ ಜನಸಂಪರ್ಕ ಸಭೆಯ ನಡಾವಳಿ.

ಈ ಕೆಳಕಂಡ ಅಧಿಕಾರಿಗಳು/ಗ್ರಾಹಕರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದರು.

**ಅಧಿಕಾರಿಗಳು:**

ಶ್ರೀ/ಶ್ರೀಮತಿ

1. ಚಿಕ್ಕಸಿದ್ದೇಗೌಡ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು
2. ವಿ. ದೀಪಕ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ, ಸೆಸ್ಕ್, ಮೈಸೂರು.
3. ಆರ್, ಮದನ್, ಸಹಾಯಕ ಇಂಜಿನಿಯರ್(ವಿ), ಅರವಿಂದ ಶಾಖೆ,
4. ಕೆ.ವಿ. ಮುರಳಿ, ಸಹಾಯಕ ಇಂಜಿನಿಯರ್(ವಿ), ನಿವೇದಿತ ಶಾಖೆ,
5. ಬಿ.ಬಿ. ಶಿವಣ್ಣ ಸಹಾಯಕ ಇಂಜಿನಿಯರ್(ವಿ), ಸರಸ್ವತಿಪುರಂ ಶಾಖೆ,
6. ಮಧುಸೂದನ್ ಸಹಾಯಕ ಲೆಕ್ಕಾಧಿಕಾರಿ,

**ಗ್ರಾಹಕರು:**

ಶ್ರೀ/ಶ್ರೀಮತಿ

1. ನಾಗಭೂಷಣ ಆರಾಧ್ಯ,
2. ಎಂ.ಎಸ್. ಮಂಜುನಾಥ
3. ಪಿ. ಪ್ರಕಾಶ್,
4. ರಂಗನಾಥ್ ಎಸ್.

ಮೊದಲಿಗೆ ಅಧೀಕ್ಷಕ ಇಂಜಿನಿಯರ್(ವಿ) ರವರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರನ್ನು ಹಾಗೂ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುವ ಮೂಲಕ ಕೆ.ಇ.ಆರ್.ಸಿ. ನಿಯಮಾವಳಿಯ ಅನ್ವಯ ಪ್ರತಿ 3 ತಿಂಗಳಿಗೊಮ್ಮೆ ಎಲ್ಲಾ ಉಪವಿಭಾಗಗಳಲ್ಲಿ ಜನಸಂಪರ್ಕ ಸಭೆಯನ್ನು ನಡೆಸುತ್ತಿರುವುದಾಗಿ ತಿಳಿಸಿ ಈ ಹಿಂದೆ ದಿನಾಂಕ: 12-07-2018 ರಂದು ನಡೆಸಿದ ಜನಸಂಪರ್ಕ ಸಭೆಯಲ್ಲಿ ಗ್ರಾಹಕರಿಂದ ನಡೆಸಿದ ಜನಸಂಪರ್ಕ ಸಭೆಯಲ್ಲಿ ಗ್ರಾಹಕರಿಂದ 1 ದೂರು ಬಂದಿದ್ದು, ಆ ದೂರನ್ನು ಪರಿಹರಿಸಿರುವ ಬಗ್ಗೆ ಪರಿಶೀಲಿಸಿ ಪರಿಹರಿಸಿರುವುದಾಗಿ ತಿಳಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದ ಗ್ರಾಹಕರಲ್ಲಿ ಈ ಕೆಳಕಂಡ ಗ್ರಾಹಕರು ತಮ್ಮ ಸಲಹೆಗಳು ಹಾಗೂ ಅವರ ಸಮಸ್ಯೆಗಳ ಬಗ್ಗೆ ತಿಳಿಸಿರುತ್ತಾರೆ.

1. ಶ್ರೀ ನಾಗಭೂಷಣ ಆರಾಧ್ಯ, ವಿದ್ಯುತ್ ಗುತ್ತಿಗೆದಾರರು, ದೂರವಾಣಿ ಸಂಖ್ಯೆ: 9886230439

   ಅ) ಅಪೋಲೋ ಬಿ.ಜಿ.ಎಸ್ ಆಸ್ಪತ್ರೆ ಎದುರು ಇರುವ ದೋಸೆ ಪಾಯಿಂಟ್ ಹೋಟೆಲ್ ಸ್ಥಾವರವು ವಾಣಿಜ್ಯ ಸ್ಥಾವರವಾಗಿದ್ದು, ಇದಕ್ಕೆ ಸೋಲಾರ್ ಅಳವಡಿಸಿರುವುದಿಲ್ಲ ಆದರೂ ವಿದ್ಯುತ್ ಸಂಪರ್ಕವನ್ನು ನೀಡಲಾಗಿದೆ ಎಂದು ತಿಳಿಸಿದರು.

   **ಅಧೀಕ್ಷಕ ಇಂಜಿನಿಯರ್(ವಿ):** ನಿಗಮದ ನಿಯಮಾನುಸಾರ ಗೃಹಬಳಕೆ ಸ್ಥಾವರಗಳಿಗೆ 30 x 40 ಅಳತೆಗಿಂತ ಹೆಚ್ಚಿನ ವಿಸ್ತೀರ್ಣದ ನಿವೇಶನದ ಸ್ಥಾವರಗಳಿಗೆ ಮಾತ್ರ ಸೋಲಾರ್ ಅಳವಡಿಸುವುದು ಕಡ್ಡಾಯವಾಗಿದ್ದು, ವಾಣಿಜ್ಯ ಬಳಕೆ ಸ್ಥಾವರಗಳಿಗೆ ಸೋಲಾರ್ ಅಳವಡಿಸಬೇಕಾಗಿರುವುದು ಕಡ್ಡಾಯವಾಗಿರುವುದಿಲ್ಲ ಎಂದು ತಿಳಿಸಿದರು.

ಆ) ಅಪ್ಪೋಲೋ ಬಿ.ಜಿ.ಎಸ್ ಆಸ್ಪತ್ರೆ ಎದುರು ಇರುವ ದೋಸೆ ಪಾಯಿಂಟ್ ಹೋಟೆಲ್ ಪಕ್ಕದಲ್ಲಿರುವ ಅಪಾರ್ಟ್‌ಮೆಂಟ್ ಮೇಲೆ ಅಳವಡಿಸಲಾಗಿರುವ ಟವರ್ ಸ್ಥಾವರಕ್ಕೆ ಉಪಸಂಪರ್ಕ ತೆಗೆದುಕೊಳ್ಳುವ ಬದಲಾಗಿ ಓವರ್‌ಹೆಡ್‌ನಿಂದ ವಿದ್ಯುತ್ ಸಂಪರ್ಕವನ್ನು ನೀಡಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

**ಅಧೀಕ್ಷಕ ಇಂಜಿನಿಯರ್(ವಿ):** ಸದರಿ ಸ್ಥಾವರವು ಸರಸ್ವತಿಪುರಂ ಶಾಖೆಯ ವ್ಯಾಪ್ತಿಗೆ ಬರುವುದರಿಂದ, ಸಂಬಂಧಪಟ್ಟ ಶಾಖಾಧಿಕಾರಿಗಳು ಸ್ಥಳ ಪರಿಶೀಲಿಸಿ ವರದಿ ನೀಡಲು ತಿಳಿಸಿದರು.

ಇ) ವಿದ್ಯುತ್ ಖಾತೆಯಲ್ಲಿ ಹೆಸರು ಬದಲಾವಣೆಗೆ ಸಂಬಂಧಿಸಿದಂತೆ, ಒಬ್ಬ ಗ್ರಾಹಕರು ಮೃತರಾಗಿದ್ದು, ಹೆಂಡತಿ/ಮಗ ಅವರು ವಾಸಿಸುತ್ತಿರುವ ಮನೆಯಖಾತೆ ಮಾಡಿಸಿಕೊಂಡಿರುವುದಿಲ್ಲ. ಆದರೆ ತಹಸೀಲ್ದಾರ್ ರವರಿಂದ ಸದರಿಯವರೇ ವಾರಸುದಾರರೆಂದು ಪತ್ರ ನೀಡಿದಲ್ಲಿ ವಿದ್ಯುತ್ ಖಾತೆಯನ್ನು ಬದಲಾಯಿಸುವ ಬಗ್ಗೆ ತಿಳಿಸಿದರು.

**ಅಧೀಕ್ಷಕ ಇಂಜಿನಿಯರ್(ವಿ):** ಸದರಿ ಸ್ಥಾವರವು ಮೂಡಾ ವ್ಯಾಪ್ತಿಗೆ ಬರುವುದರಿಂದ, ಮೃತರ ಹೆಸರಿನಲ್ಲಿರುವ ನಿವೇಶನದ ಖಾತೆಯನ್ನು ಅವರ ಹೆಂಡತಿ/ಮಗ ರವರ ಹೆಸರಿಗೆ ವರ್ಗಾಯಿಸಿ ಖಾತಾ ಪ್ರತಿಯನ್ನು ನೀಡಿದಲ್ಲಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಿದರು.

2. ಶ್ರೀ ಎಂ.ಎಸ್. ಮಂಜುನಾಥ, ವಿದ್ಯುತ್ ಗುತ್ತಿಗೆದಾರರು, ದೂರವಾಣಿ ಸಂಖ್ಯೆ: 9886960282

ಅ) ಯಾವುದೇ ಸ್ಥಾವರದ ಉಪಸಂಪರ್ಕ(Tapping service) ಪಡೆಯಲು ಅರ್ಜಿ ನೋಂದಾಯಿಸಿದಲ್ಲಿ ಗಣಕಯಂತ್ರದಲ್ಲಿ ನಡೆಯಬೇಕಾದ ಪ್ರಕ್ರಿಯೆಯು ಎಲ್ಲಾ ಉಪವಿಭಾಗಗಳಲ್ಲಿಯೂ ತುಂಬಾ ನಿಧಾನವಾಗುತ್ತಿದೆ ಎಂದು ತಿಳಿಸಿದರು.

**ಅಧೀಕ್ಷಕ ಇಂಜಿನಿಯರ್(ವಿ):** ಈ ಕುರಿತು ಸಂಬಂಧಪಟ್ಟ ಸಂಸ್ಥೆಯವರಿಗೆ ತಿಳಿಸಿ ಸಮಸ್ಯೆಯನ್ನು ಆದಷ್ಟು ಶೀಘ್ರವಾಗಿ ಬಗೆಹರಿಸುವುದಾಗಿ ತಿಳಿಸಿದರು.

ಆ) ಕುವೆಂಪುನಗರ ಉಪವಿಭಾಗದ ಆವರಣದಲ್ಲಿ ಗ್ರಾಹಕರಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಮಾಡಲು ಸೂಚಿಸಿದರು.

**ಅಧೀಕ್ಷಕ ಇಂಜಿನಿಯರ್(ವಿ):** ಈ ಕೂಡಲೇ ಗ್ರಾಹಕರಿಗೆ ಆಸನದ ವ್ಯವಸ್ಥೆಗೆ ಸೂಕ್ತ ಕ್ರಮ ಕೈಗೊಳ್ಳಲು ಕುವೆಂಪುನಗರ ಉಪವಿಭಾಗಾಧಿಕಾರಿಗಳಿಗೆ ಸೂಚಿಸಿದರು.

3. ಶ್ರೀ. ಎಸ್. ರಂಗನಾಥ, ವಿದ್ಯುತ್ ಗುತ್ತಿಗೆದ್ದಾರರು. ದೂರವಾಣಿ ಸಂಖ್ಯೆ: 9448872620

ಶ್ರೀಮತಿ ಮಂಗಳಾದೇವಿ ರವರ ಆರ್.ಆರ್.ಸಂಖ್ಯೆ: ಎ36984 ಸ್ಥಾವರದ ಶಾಶ್ವತ ವಿದ್ಯುತ್ ನಿಲುಗಡೆಗಾಗಿ ಅರ್ಜಿಯನ್ನು ನೀಡಲಾಗಿದ್ದು, ವಿಳಂಬವಾಗುತ್ತಿದೆ ಎಂದು ತಿಳಿಸಿರುತ್ತಾರೆ.

**ಅಧೀಕ್ಷಕ ಇಂಜಿನಿಯರ್(ವಿ):** ಸದರಿ ಸ್ಥಾವರದ ಶಾಶ್ವತ ವಿದ್ಯುತ್ ನಿಲುಗಡೆ ಕಾರ್ಯದ ವಿಳಂಬದ ಬಗ್ಗೆ ಪರಿಶೀಲಿಸಿ ಕೂಡಲೇ ಸ್ಥಾವರವನ್ನು ಶಾಶ್ವತ ವಿದ್ಯುತ್ ನಿಲುಗಡೆಗೊಳಿಸಲು ಸಹಾಯಕ ಲೆಕ್ಕಾಧಿಕಾರಿಯವರಿಗೆ ತಿಳಿಸಿದರು.

ಕುವೆಂಪುನಗರ ಉಪವಿಭಾಗದ ವ್ಯಾಪ್ತಿಯಲ್ಲಿ ನಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆ ಇದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕುವೆಂಪುನಗರ ಉಪವಿಭಾಗ ರವರಿಗೆ ದೂರವಾಣಿ ಮೂಲಕ ಅಥವಾ ಕಛೇರಿಗೆ ಬಂದು ತಿಳಿಸಿದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕುವೆಂಪುನಗರ ಉಪವಿಭಾಗ, ಚಾ.ವಿ.ಸ.ನಿ.ನಿ., ಮೈಸೂರು

ಸಂಖ್ಯೆ: ಸಕಾನಿಇಂ(ವಿ), ಸ.ಇಂ(ತಾಂ)/ಕುನ/ಉವಿ/ 8195-96 ದಿನಾಂಕ: 12/12/18

ಪ್ರತಿಯನ್ನು,

1. ಅಧೀಕ್ಷಕ ಇಂಜಿನಿಯರ್(ವಿ), ಕಾ.ಮತ್ತು ಪಾ.ವೃತ್ತ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲ ವಿಭಾಗ, ಚಾವಿಸನಿನಿ., ಮೈಸೂರು ರವರ ಅವಗಾಹನೆಗಾಗಿ.
3. ಶಾಖಾಧಿಕಾರಿಗಳು, ಸರಸ್ವತಿಪುರಂ ಶಾಖೆ, ಅರವಿಂದ ಶಾಖೆ, ನಿವೇದಿತ ಶಾಖೆ, ಕಂದಾಯ ಶಾಖೆ, ತಾಂತ್ರಿಕ ಶಾಖೆ, ಕುವೆಂಪುನಗರ ಉಪವಿಭಾಗ, ಚಾವಿಸನಿನಿ.,ಮೈಸೂರು ರವರಿಗೆ.

ಕ.ಕ.